ಒ ಎಸ್ ನಂ.290/2012
ಡಿ.ಡಬ್ಲ್ಯೂಃ 8 ಹಾಜರು

ದಿನಾಂಕಃ 09-03-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀಯುತ ಎನ್ ಎಸ್ ಜಿ ವಕೀಲರಿಂದಃ

ಈ ದಿನ ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನೀಡಿದ್ದು ಅದರಲ್ಲಿ ಹೇಳಿರುವ ಅಂಶಗಳೆಲ್ಲವು ಸರಿಯಿದ್ದು ಅದನ್ನು ನಾನೇ ಹೇಳಿ ಬರೆಸಿದ್ದು ಅದಕ್ಕೆ ನನ್ನ ಸಹಿ ಕೂಡಾ ಇರುತ್ತದೆ.

ಪಾಟೀ ಸವಾಲು ಶ್ರೀಯುತ ಎಸ್ ವಿ ಡಿ ವಕೀಲರಿಂದಃ
ವಾದಿಯ ಪರವಾಗಿಃ

1. ನನಗೆ ಮೊದಲನೆ ಪ್ರತಿವಾದಿಯ ಎಲ್ಲಾ ಮಕ್ಕಳ ಹೆಸರು ಗೊತ್ತಿಲ್ಲ. ಮೊದಲನೆ ಪ್ರತಿವಾದಿಯ ಮಕ್ಕಳು ಪ್ರತ್ಯೇಕವಾಗಿ ಯಾವ ಯಾವ ವ್ಯಾಪಾರ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳು ಸುಮಾರು 30 ವರ್ಷದಿಂದ ಪರಿಚಯ. ವಾದಿ ಮತ್ತು ಪ್ರತಿವಾದಿಗಳಿಗೆ ಸಂಬಂಧಿಸಿದ ಮನೆ ಚೇತ್ರಾ ಟಾಕೀಸ ಬಳಿ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ವಾದಿ ಮತ್ತು ಪ್ರತಿವಾದಿಗಳು ಕೂಡಿ ಇದ್ದ ವಿಷಯ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಮಾಡಿಕೊಂಡ ವಾಟ್ನಿ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಪ್ರತ್ಯೇಕ ಪ್ರತ್ಯೇಕ ವ್ಯಾಪಾರ ಮಾಡಿಕೊಂಡು ಆಸ್ತಿಗಳನ್ನು ಖರೀದಿಸಿದ ವಿಷಯ ನನಗೆ ಗೊತ್ತಿಲ್ಲ. ನಾನು ಮೊದಲನೆ ಪ್ರತಿವಾದಿಯ ಮಕ್ಕಳಿಗೆ ಸಂಬಂಧಪಟ್ಟಂತೆ 4 ಮನೆಗಳನ್ನು ಕಟ್ಟಿರುತ್ತೇನೆ. ನನಗೆ ಮೊದಲನೆ ಪ್ರತಿವಾದಿ ಮನೆ ಕಟ್ಟಿದ್ದು ಮಾತ್ರ ಗೊತ್ತು. ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ಇದ್ದು ಅವರ ಉದ್ಯೋಗ ಹೆಚ್ಚಾಗಿದ್ದರಿಂದ ಅದರ ಉದ್ದೇಶಕ್ಕಾಗಿ ಮಾತ್ರ ಬೇರೆ ಬೇರೆ ಉದ್ಯೋಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಸಮಾಯಕವಾಗಿ ತಮ್ಮ ವ್ಯಾಪಾರದಿಂದ ಬಂದ ಲಾಭವನ್ನು ಹಂಚಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು 11 ನೇ ಪ್ರತಿವಾದಿಗೆ ಲಕ್ಷ್ಮೀ ಗುಡಿಯ ಪಕ್ಕದಲ್ಲಿ ಮನೆ ಕಟ್ಟಿ ಕೊಟ್ಟಿರುತ್ತೇನೆ. ನಾನು ವಾದಿಗೆ ಯಾವುದೇ ಮನೆ ಕಟ್ಟಿಸಿಕೊಟ್ಟಿಲ್ಲ. ನಾನು 11 ನೇ ಪ್ರತಿವಾದಿ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ವಾಟ್ನಿಯಾಗಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಸ್ ಸಿ ಜಿ ವಕೀಲರಿಂದಃ

10 ನೇ ಪ್ರತಿವಾದಿಯ ಪರವಾಗಿಃ

11 ನೇ ಪ್ರತಿವಾದಿಗೆ ಲಕ್ಷ್ಮೀ ಗುಡಿಯ ಹತ್ತಿರ ನಾನು ಮನೆ ಕಟ್ಟಿದ ಸ್ಥಳದಲ್ಲಿ ಕಾರ್ಖಾನೆ ಇದೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಗೋಕಾಕದ ಚಿತ್ರಾ ಟಾಕೀಸ ಬಳಿ ಇರುವ ಮನೆ ಹೊರತು ಪಡಿಸಿ ಬೇರೆ ಮನೆ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿಯೇ ವಾದಿ ಮತ್ತು ಪ್ರತಿವಾದಿಗಳು ಕೂಡಿ ಇರುತ್ತಾರೆ ಎಂದರೆ ಸಾಕ್ಷಿ ಬೇರೆ ಬೇರೆ ಇರುತ್ತಾರೆಂದು ನುಡಿದಿರುತ್ತಾರೆ. ನಾನು ಮತ್ತು 11 ನೇ ಪ್ರತಿವಾದಿ ಗೆಳೆಯರಾಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15 ರಿಂದ 17 ರ ಪರ ವಕೀಲರು ವಾದಿಯ ಪರ ವಕೀಲರು ಮಾಡಿದ ಮೇಲಿನ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

ಶ್ರೀ ಎಲ್ ಎಮ್ ಎಸ್ ವಕೀಲರು ತಮ್ಮ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ